# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :10 ಫ್ರಾ.ಸಾ. : 22**

| | | |
|---|---|---|
| ಸಾಕ್ಷಿಯ ಹೆಸರು | : | ರಾಮ ರಜಪೂತ್ |
| ತಂದೆಯ ಹೆಸರು | : | ರಾಜು ರಜಪೂತ್ |
| ವಯಸ್ಸು | : | 39 ವರ್ಷ |
| ಕೆಲಸ | : | ಹಣ್ಣಿನ ಅಂಗಡಿ |
| ವಾಸ | : | ನಂದಗಡ್, ಖಾನಾಪುರ, ಬೆಳಗಾವಿ |

**ದಿನಾಂಕಃ 15-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

1. ದಿಃ 27-10-2018 ರಂದು ನಾನು ಖಾನಾಪುರದ ವನಮಾಲ ಹೋಟೇಲಿನ ಬಳಿ ಇದ್ದಾಗ ಕಾರವಾರದ ಪೊಲೀಸರು 2 ಮತ್ತು 3 ನೇ ಆರೋಪಿತರೊಂದಿಗೆ ಅಲ್ಲಿಗೆ ಬಂದು ನನಗೆ ಪಂಚನಾಮೆಗೆ ಬರುವಂತೆ ನೋಟೀಸ್ ನೀಡಿ, ಆನಂತರ ನನ್ನನ್ನು ಸದರಿ ಹೊಟೇಲಿನ ಬಳಿಯಿಂದ 200 ಮೀ. ದೂರದಲ್ಲಿದ್ದ ಚಾಸಾ-32 ರವರ ಗ್ಯಾರೇಜಿನ ಬಳಿ ನಿಲ್ಲಿಸಿದ್ದ ಕಾರಿನ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ 2 ನೇ ಆರೋಪಿ ಕಾರನ್ನು ತೋರಿಸಿದ ಮೇರೆಗೆ ಪೊಲೀಸರು ಜಪ್ತು ಪಂಚನಾಮೆ ಮಾಡಿ, ನನ್ನ ಸಹಿ ಪಡೆದುಕೊಂಡರು ಹಾಗೂ ಫೋಟೊ ತೆಗೆದರು ಮತ್ತು ಸದರಿ ಕಾರನ್ನು ಜಪ್ತುಪಡಿಸಿಕೊಂಡರು. ಸದರಿ ಕಾರು ಮಹಾರಾಷ್ಟ್ರ ರಾಜ್ಯದ ನೊಂದಣಿಯಾಗಿದ್ದು, ಎಂ.ಹೆಚ್-04 ಮಾತ್ರ ಈಗ ನನಗೆ ನೆನಪಿರುತ್ತದೆ. ಜಪ್ತು ಪಂಚನಾಮೆಯ ಕಾಲಕ್ಕೆ ಪೊಲೀಸರು ಸದರಿ ಕಾರಿನಲ್ಲಿದ್ದ ದಾಖಲೆಗಳನ್ನು ಜಪ್ತುಪಡಿಸಿಕೊಂಡರು. ಆದರೆ, ಬೇರೆ ಏನನ್ನು ಜಪ್ತುಪಡಿಸಿಕೊಂಡರು ಎಂದು ನನಗೆ ನೆನಪಿಲ್ಲ. ಸದರಿ ಜಪ್ತು ಪಂಚನಾಮೆಗೆ ಚಾಸಾ-9 ರವರೂ ಸಹ ಸಹಿ ಮಾಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ಬೆಳಿಗ್ಗೆ 11.00 ರಿಂದ 1.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಪೊಲೀಸರು ತನಗೆ ನೀಡಿದ ನೋಟಿಸನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-55 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-55(ಎ) ಎಂದು ಗುರುತಿಸಲಾಯಿತು.

ಕಾರಿನ ಜಪ್ತು ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-34 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-34(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-35 ಮತ್ತು 36 ಎಂದು ಗುರುತಿಸಲಾಗಿದ್ದು, ಅವುಗಳನ್ನು ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ರೀತಿ, ಸದರಿ ಫೋಟೊಗಳಲ್ಲಿ ಚಾಸಾ-9 ಜಾಫರ್, ಚಾಸಾ-32 ವಾಹಿದ್ ಮತ್ತು ಜಪ್ತುಪಡಿಸಿಕೊಂಡ ಕಾರು, 2 ನೇ ಆರೋಪಿ ಮತ್ತು ಪೊಲೀಸರು ಇರುತ್ತಾರೆ ಎಂದು ನುಡಿದಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಈದಿನ ನ್ಯಾಯಾಲಯದ ಮುಂದಿರುವ ಕಾರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು ನಂ.11 ಎಂದು ಗುರುತಿಸಲಾಯಿತು.

2. ಸಾಕ್ಷಿಗೆ ಈಗ ತೋರಿಸಿದ ನಿಪಿ-39 ಧ್ವನಿ ಮುದ್ರಣಾ ಸಿ.ಡಿ. ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-39(ಬಿ) ಎಂದು ಗುರುತಿಸಲಾಯಿತು. ಯಾವ ಕಾರಣಕ್ಕಾಗಿ ನನ್ನ ಸಹಿಯನ್ನು ಪಡೆದುಕೊಂಡರು ಎಂದು ನನಗೆ ಗೊತ್ತಿಲ್ಲ ಹಾಗೂ ಏನನ್ನು ಜಪ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

3. ದಿನಾಂಕ 27-10-2018 ರಂದು ನಿಪಿ-34 ಜಪ್ತು ಪಂಚನಾಮೆ ಮಾಡುವ ಸಮಯದಲ್ಲಿ 2 ನೇ ಆರೋಪಿ ತಾನು ಪ್ರೇಮ ಕುಮಾರನನ್ನು ಕೊಲೆ ಮಾಡುವ ಉದ್ದೇಶದಿಂದ ಆತನನ್ನು ಕಾರಿನಲ್ಲಿ ಕರೆದುಕೊಂಡು ಹೋಗಿ, ಉಳವಿಯಲ್ಲಿ ಹತ್ಯೆ ಮಾಡಿದ ನಂತರ ಸದರಿ ಕಾರನ್ನು ಖಾನಾಪುರದ ಚಾಸಾ-32 ರವರ ಗ್ಯಾರೇಜಿನಲ್ಲಿ ಇಟ್ಟಿರುವುದಾಗಿ ಹೇಳಿರುತ್ತಾನೆ ಎಂದರೆ, ಸಾಕ್ಷಿಯು 2 ನೇ ಆರೋಪಿಯು ಪೊಲೀಸರೊಂದಿಗೆ ಇದ್ದು, ಕಾರನ್ನು ತೋರಿಸಿದ್ದು ನಿಜವಿರುತ್ತದೆ. ಆದರೆ, ಆತ ಏನನ್ನು ಹೇಳಿದ ಎಂದು ನನಗೆ ನೆನಪಿಲ್ಲ. 2 ನೇ ಆರೋಪಿ

ತೋರಿಸಿದ ಕಾರಿನ ನಂ. ಎಂ.ಹೆಚ್‌–04/ಬಿ.ಕೆ–0726 ಆಗಿತ್ತು ಎಂದರೆ ಸರಿ. ಪೊಲೀಸರು ಕಾರನ್ನು ತೆರೆದು ನೋಡಿದಾಗ ಅದರಲ್ಲಿ ಎರಡು ಲಕೋಟೆಗಳಿದ್ದವು ಎಂದರೆ ಸರಿ. ಸದರಿ ಒಂದು ಲಕೋಟೆಯಲ್ಲಿ 1) Pre owned Car booking / Commitment checklist ಎಂದು ಬರೆದಿರುವ ಕಾಗದ ಪತ್ರವಿದ್ದು, ಅದರಲ್ಲಿ ಕಸ್ಟಮರ್ ನೇಮ್ ಎಂದು ಬರೆದಿರುವ ಜಾಗದಲ್ಲಿ ಮುಸ್ತಾಕ್ ಅಹಮದ್ ಹೆಚ್ ಶೇಖ್, ಮಾರುತಿ ನಗರ ಎಂದು ಬರೆದಿರುತ್ತದೆ. ಸದರಿ ಲಕೋಟೆಯಲ್ಲಿ ಇನ್ನೊಂದು ಕಾಗದ ಪತ್ರವಿದ್ದು, ಅದು ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಡುವ ಅರ್ಜಿಯಾಗಿರುತ್ತದೆ ಹಾಗೂ ಕಾರು ಟ್ರಾನ್ಸಫರ್ ಮಾಡುವವರ ಸಹಿ ಇರುವ ಫಾರ್ಮ್ ನಂ.29 ರ ಮೂರು ಪ್ರತಿಗಳು ಹಾಗೂ ಫಾರ್ಮ್ ನಂ.30 ರ ಒಂದು ಪ್ರತಿ ಇದ್ದವು ಎಂದರೆ ಸಾಕ್ಷಿಯು ಕಾಗದ ಪತ್ರಗಳು ಇದ್ದದ್ದು ನಿಜ ಆದರೆ, ಅವುಗಳು ಏನು ದಾಖಲೆಗಳು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ಅದೇ ರೀತಿ ಪೊಲೀಸರು ಇನ್ನೊಂದು ಲಕೋಟೆಯನ್ನು ಪರೀಕ್ಷಿಸಿದಾಗ, ಸದರಿ ಕಾರಿನ ದಾಖಲೆಗಳಾದ ಇನ್ಸೂರೆನ್ಸ್ ಪ್ರಮಾಣ ಪತ್ರ ಮತ್ತು ಹೊಗೆ ತಪಾಸಣಾ ಪತ್ರವಿರುತ್ತದೆ, ಹಾಗೂ ಸದರಿ ಲಕೋಟೆಯಲ್ಲಿ ರೂ.5,090/– ಮತ್ತು ರೂ.40,000/– ಮೊತ್ತಗಳ ರಶೀದಿಗಳು ಇದ್ದು, ಅವುಗಳು 2 ನೇ ಆರೋಪಿಯ ಹೆಸರಿನಲ್ಲಿದ್ದವು ಎಂದರೆ ಸಾಕ್ಷಿಯು ಕಾಗದ ಪತ್ರಗಳು ಇದ್ದದ್ದು ನಿಜ ಆದರೆ, ಅವುಗಳು ಏನು ದಾಖಲೆಗಳು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಸದರಿ ಎರಡೂ ಲಕೋಟೆಗಳಲ್ಲಿ ಲಭ್ಯವಾದ ದಾಖಲೆಗಳನ್ನು ತೆಗೆದುಕೊಂಡು, ಅವುಗಳ ಮೇಲೆ ನಮ್ಮ ಸಹಿಯನ್ನು ಪಡೆದುಕೊಂಡರು ಎಂದರೆ ಸರಿ. ನಿಪಿ–37 ಮತ್ತು 38 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–37(ಎ) ಮತ್ತು ಪಿ–38(ಎ) ಎಂದು ಗುರುತಿಸಲಾಯಿತು. ಸದರಿ ಜಪ್ತುಪಂಚನಾಮೆಯ ಕಾಲಕ್ಕೆ ಮುದ್ದೆಮಾಲು ನಂ.11 ಕಾರಿನ ಮುಂದುಗಡೆಯ ಎಡ ಸೀಟಿನ ಹಿಂಬದಿಯ ಕಿಸೆಯಲ್ಲಿ ಒಂದು ಗೋವಾ ಪೆನ್ನಿ ಸಾರಾಯಿ ಬಾಟಲಿ ಸಿಕ್ಕಿದ್ದು, ಪೊಲೀಸರು ಅದನ್ನೂ ಸಹ ಜಪ್ತಪಡಿಸಿಕೊಂಡು ನನ್ನ ಸಹಿ ಪಡೆದುಕೊಂಡರು ಎಂದರೆ ಸರಿ. ಸದರಿ ಬಾಟಲಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆಮಾಲು ನಂ.–13 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–13(ಎ) ಎಂದು ಗುರುತಿಸಲಾಯಿತು.

5. ನಂತರ ಸ್ಥಳದಲ್ಲಿ ಹಾಜರಿದ್ದ ಚಾಸಾ–32 ರವರು ನಮ್ಮನ್ನು, ಪೊಲೀಸರನ್ನು ಮತ್ತು 2 ನೇ ಆರೋಪಿಯನ್ನು ತನ್ನ ಗ್ಯಾರೇಜಿಗೆ ಕರೆದುಕೊಂಡು ಹೋಗಿ, ತನ್ನ ಮೊಬೈಲನ್ನು ತೋರಿಸಿ, 1 ನೇ ಆರೋಪಿ ರಿಜ್ವಾನ್ ಈತನು ನನಗೆ ಕರೆ ಮಾಡಿದ್ದಾಗ ಸದರಿ ಕರೆಯು ನನ್ನ ಫೋನಿನಲ್ಲಿ ಆಟೋ ರೆಕಾರ್ಡ್ ಆಗಿರುತ್ತದೆ ಎಂದು ಹೇಳಿದ್ದು, ಪೊಲೀಸರು ಆತನ ಫೋನನ್ನು ಪರಿಶೀಲಿಸಿದಾಗ 1 ನೇ ಆರೋಪಿಯು ಚಾಸಾ–32 ರವರಿಗೆ ಕರೆ ಮಾಡಿ, ಕಾರಿನ ನಂಬರ್ ಪ್ಲೇಟನ್ನು ತೆಗೆದಿಡುವಂತೆ ಹೇಳಿರುವುದು ಹಾಗೂ ಕಾರಿನ ಬಗ್ಗೆ ಮಾತನಾಡಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಆನಂತರ ಪೊಲೀಸರು ಸದರಿ ಫೋನನ್ನು ತಮ್ಮೊಂದಿಗೆ ತಂದಿದ್ದ ಲ್ಯಾಪ್–ಟಾಪ್ ಗೆ ಅಳವಡಿಸಿ, ಫೋನಿನಲ್ಲಿ ಸೇವ್ ಆಗಿದ್ದ ಆಡಿಯೋ ಸಂಭಾಷಣೆಯನ್ನು ತಮ್ಮ ಲ್ಯಾಪ್–ಟಾಪ್ ಗೆ ವರ್ಗಾಯಿಸಿ, ನಂತರ ಅದನ್ನು ಖಾಲಿ ಸಿ.ಡಿ.ಗೆ ವರ್ಗಾಯಿಸಿ, ನಂತರ ಸಿ.ಡಿ.ಯನ್ನು ಪ್ಲೇ ಮಾಡಿ 1 ನೇ ಆರೋಪಿಯ ಕರೆ ಸಂಭಾಷಣೆ ಕೇಳಿ ನಮ್ಮ ಸಮಕ್ಷಮ ಆ ಸಿ.ಡಿ.ಯನ್ನು ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಸಿ.ಡಿ.ಯನ್ನು ಜಪ್ತುಪಡಿಸಿಕೊಳ್ಳುವಾಗ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿ. ಸದರಿ ಸಿ.ಡಿ.ಯನ್ನು ಈಗಾಗಲೇ ನಿಪಿ–40 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–40(ಬಿ) ಎಂದು ಗುರುತಿಸಲಾಯಿತು. ಸದರಿ ಸಿ.ಡಿ. ಜಪ್ತು ಪಂಚನಾಮೆಯನ್ನು ಸಂಜೆ 4.00 ರಿಂದ 5.00 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸಮಯ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಮ್ಮ ಸಮಕ್ಷಮ ಚಾಸಾ–32 ರವರು ಮೊಬೈಲನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಧ್ವನಿ ಸಂಭಾಷಣೆಯನ್ನು ಕೇಳಿ ತಿಳಿದುಕೊಂಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

6. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿರುವುದಿಲ್ಲ. ಪೊಲೀಸರು ಕಾರಿನ ಬಳಿ ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರು ಸಹಿ ಹಾಕಲು ಹೇಳಿದ್ದರಿಂದ, ನಾನು ಸಹಿ ಮಾಡಿದ್ದೇನೆ ಎಂದರೆ ಸರಿ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

7. ನನ್ನ ಊರು ನಂದಗಡ ಹಾಗೂ ಖಾನಾಪುರಕ್ಕೆ 11 ಕಿ.ಮೀ. ಅಂತರವಿರುತ್ತದೆ. ನಾನು ಖಾನಾಪುರದಲ್ಲಿ ತಳ್ಳು ಗಾಡಿಯ ಮೇಲೆ ಹಣ್ಣಿನ ವ್ಯಾಪಾರ ಮಾಡುತ್ತೇನೆ. ಪ್ರತಿದಿನ ನಂದಗಡದಿಂದ ಖಾನಾಪುರಕ್ಕೆ ನಾನು ಬೆಳಿಗ್ಗೆ 8.00 ಗಂಟೆಗೆ ಬರುತ್ತೇನೆ. ಖಾನಾಪುರದ ರೈಲ್ವೇ ಸ್ಟೇಷನ್ ರಸ್ತೆಯ ಬಳಿ ಹಣ್ಣಿನ ವ್ಯಾಪಾರ ಮಾಡುತ್ತೇನೆ. ರೈಲ್ವೇ ನಿಲ್ದಾಣದಿಂದ ಚಾಸಾ–32 ರವರ ಗ್ಯಾರೇಜ್ ಸುಮಾರು 32 ಕಿ.ಮೀ. ಇರುತ್ತದೆ. ಚಾಸಾ–9 ರವರು ನನಗೆ ಪರಿಚಯ. ಚಾಸಾ–9 ರವರು ನನಗೆ ಪರಿಚಯವಿರುವ ಕಾರಣ, ಆತ ನನ್ನನ್ನು ಕರೆದುಕೊಂಡು ಹೋಗಿರುತ್ತಾನೆ ಎಂದರೆ ಸರಿಯಲ್ಲ. ಆದಿನ ನಾನು ಚಾಸಾ–32 ರವರ ಗ್ಯಾರೇಜಿನ ಬಳಿ ನನ್ನ ಮಾಲೀಕರ ವಾಹನ ಸರಿಪಡಿಸಲು ಹೋಗಿರುತ್ತೇನೆ. ಚಾಸಾ–32 ರವರ ಗ್ಯಾರೇಜು 10 X 10 ಅಳತೆಯುಳ್ಳ ಗ್ಯಾರೇಜಾಗಿದ್ದು, ಸದರಿ ಗ್ಯಾರೇಜಿನ ಮುಂದೆ ಖಾಲಿ ಜಾಗವಿರುತ್ತದೆ. ಗ್ಯಾರೇಜಿನ ಮುಂದುಗಡೆ ಗೋವಾ–ಬೆಳಗಾವಿ ಮುಖ್ಯ ರಸ್ತೆಯಿರುತ್ತದೆ ಎಂದರೆ ಸಾಕ್ಷಿಯು ಗ್ಯಾರೇಜಿನ ಮುಂದುಗಡೆ ಸ್ವಲ್ಪ ಖಾಲಿ ಜಾಗವಿದ್ದು, ನಂತರ ರಸ್ತೆಯಿರುತ್ತದೆ. ರಸ್ತೆಯ ನಂತರ ಸಂಪೂರ್ಣ ಖಾಲಿ ಜಾಗವಿರುತ್ತದೆ. ಸದರಿ ಖಾಲಿ ಜಾಗವು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಗ್ಯಾರೇಜಿನ ಮುಂದುಗಡೆ ಇರುವ ಸ್ವಲ್ಪ ಖಾಲಿ ಜಾಗವು ರಸ್ತೆಗೆ ಸೇರುತ್ತದೆ ಎಂದರೆ ಸರಿ. ಚಾಸಾ–32 ರವರ ಗ್ಯಾರೇಜಿನ ಅಕ್ಕ–ಪಕ್ಕದಲ್ಲಿ ಅಂಗಡಿಗಳು ಇರುತ್ತವೆ ಎಂದರೆ ಸರಿ. ಗ್ಯಾರೇಜಿನ ಹಿಂದುಗಡೆ ವಾಹನಗಳನ್ನು ನಿಲ್ಲಿಸಲು ಯಾವುದೇ ಜಾಗವಿರುವುದಿಲ್ಲ.

8. ಪೊಲೀಸರು ಬಂದಂತಹ ಸಮಯದಲ್ಲಿ ಸ್ಥಳದಲ್ಲಿ ಸುಮಾರು 40–50 ಜನರು ಸೇರಿದ್ದರು. ಕಳೆದ 10–12 ವರ್ಷಗಳಿಂದ ಚಾಸಾ–32 ರವರ ಪರಿಚಯ ನನಗೆ ಇರುತ್ತದೆ. ಆದಿನ ಇಬ್ಬರು ಪೊಲೀಸರು ಅಲ್ಲಿಗೆ ಬಂದಿದ್ದರು. ಪಂಚನಾಮೆಗೆ ನನ್ನನ್ನು ಯಾರೂ ಕರೆದಿರುವುದಿಲ್ಲ. ಪಂಚನಾಮೆ ಮಾಡಿದ ಸ್ಥಳದ ಚೆಕ್ ಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಮತ್ತು ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯನ್ನು ಬರೆಯಲು ಪೊಲೀಸರಿಗೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ಪಂಚನಾಮೆ ಮಾಡಲು ಕಾರವಾರದ ಪೊಲೀಸರು ಬಂದಿದ್ದಾರೆ ಎಂದು ಚಾಸಾ–32 ರವರು ಹೇಳಿರುತ್ತಾರೆ. ಪಂಚನಾಮೆ ಮಾಡಲು ಬಂದಂತಹ

ಪೊಲೀಸರು ತಾವು ಕಾರವಾರದ ಪೊಲೀಸರು ಎಂದು ನಮ್ಮ ಬಳಿ ಹೇಳಿರುವುದಿಲ್ಲ. ಕಾರು ಯಾರಿಗೆ ಸೇರಿದ್ದು ಅಥವಾ ಅದನ್ನು ಅಲ್ಲಿ ಯಾರು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು, 2 ನೇ ಆರೋಪಿಯು ಕಾರನ್ನು ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಹೊರಗಿರುವ ಮುದ್ದೆಮಾಲು ನಂ.11 ಕಾರು ಆದಿನ ಜಪ್ತುಪಡಿಸಿಕೊಂಡ ಕಾರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ, ಅದೇ ಮಾಡೆಲಿನ ಕಾರನ್ನು ಪೊಲೀಸರು ಜಪ್ತುಪಡಿಸಿಕೊಂಡಿರುತ್ತಾರೆ. ಈ ದಿನ ನ್ಯಾಯಾಲಯದ ಹೊರಗಿರುವ ಮುದ್ದೆಮಾಲು ನಂ.11 ಕಾರನ್ನು ನೋಡಿದರೆ ಅಪಘಾತಕ್ಕೀಡಾದ ಕಾರಿನಂತೆಯೇ ಕಾಣುತ್ತದೆಯೇ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸ್ವಲ್ಪ ಕಾಣುತ್ತದೆ, ಏಕೆಂದರೆ ಅದರ ಮುಂದಿನ ಬಂಪರ್ ಕಿತ್ತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಆದಿನ ಚಾಸಾ–32 ರವರ ಗ್ಯಾರೇಜಿನ ಬಳಿ ಸುಮಾರು 2–3 ಗಂಟೆಗಳ ಕಾಲ ನಾನು ಇದ್ದೆನು. ನಿಪಿ–35 ಮತ್ತು 36 ಫೋಟೊಗಳನ್ನು ತೆಗೆಯುವ ಸಂದರ್ಭದಲ್ಲಿ ಪೊಲೀಸರು ಹೇಳಿದ್ದರಿಂದ ನಾನು ಅಲ್ಲಿ ನಿಂತಿರುತ್ತೇನೆ.

9. ಕಾರಿನಿಂದ ಜಪ್ತುಪಡಿಸಿಕೊಂಡ ದಾಖಲೆಗಳನ್ನು ಕಾರಿನಲ್ಲಿ ಯಾರು ಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ಕಾರಿನಿಂದ ಎಷ್ಟು ದಾಖಲೆಗಳನ್ನು ಪೊಲೀಸರು ತೆಗೆದುಕೊಂಡರು ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ–34 ಪಂಚನಾಮೆಯ ಮೇಲೆ ಸಹಿ ಮಾಡಿದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ. ಪೊಲೀಸರು ಪಂಚನಾಮೆಗೆ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಪಂಚನಾಮೆ ಹಾಗೂ ಜಪ್ತುಪಡಿಸಿಕೊಂಡ ವಸ್ತುಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಪಂಚನಾಮೆ ಮಾಡಿದ ಬಗ್ಗೆ ನನಗೆ ಗೊತ್ತು, ಆದರೆ ವಸ್ತುಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆದಿನ ನಾನು ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಪೊಲೀಸರು ಸಹಿ ಮಾಡಲು ನೀಡಿದ ದಾಖಲೆಗಳ ಮೇಲೆ ನಾನು ಸಹಿ ಮಾಡಿರುತ್ತೇನೆ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ಪೊಲೀಸರ ಮಾತು ಕೇಳಿಕೊಂಡು ಬಂದು ನಾನು ಈದಿನ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ನಾನು ಆದಿನ ಸಹಿ ಮಾಡಿದ್ದರಿಂದ ಈ ದಿನ ಸಾಕ್ಷಿ ನುಡಿಯುತ್ತಿದ್ದೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿಯ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

2 ನೇ ಮತ್ತು 3 ನೇ ಆರೋಪಿತರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿಯ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದಃ–**

ಯಾವುದೇ ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ